ಅಸಲು ದಾವಾ ನಂಃ 444/2022

ಪಿ.ಡಬ್ಲೂ 1

# 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **27.03.2025**

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್ ಆರ್ ಹೆಗ್ಡೆ ವಕೀಲರಿಂದ**

1. ಕಲ್ಲಪ್ಪನ ಹೆಂಡತಿ ಹೆಸರು ಕಲ್ಲವ್ವ ಸದರಿಯವರು ಹೆಸರು ಕಲ್ಲವ್ವ ಅಲ್ಲ ಸಾವಮ್ಮ ಎಂದೆ ಸರಿಯಲ್ಲ. 1 ನೇ ಪ್ರತಿವಾದಿ ಬಸಪ್ಪನ ಮೊದಲನೇ ಹೆಂಡತಿ ಮಗ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಕಲ್ಲಪ್ಪನ ಮಕ್ಕಳು ಬೇರೆ ಬೇರೆ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಒಟ್ಟಾಗಿದ್ದು ಈ ಬೇರೆ ಇದ್ದಾರೆ ಎನ್ನುತ್ತಾರೆ. ಬಸಪ್ಪನ ಜಿವಂತ ಕಾಲದಲ್ಲಿ ಅವರು ಬೇರೆ ಬೇರೆ ಇದ್ದಾರೆ ಎಂದರೆ ಸರಿ. ಅಂದಾಜು ಎಷ್ಟು ವರುಷದಿಂದ ಅವರು ಬೇರೆ ಬೇರೆ ಇದ್ದಾರೆ ಎಂದು ಹೇಳಲು ಬರುವುದಿಲ್ಲ. ಸದರಿಯವರು ಸುಮಾರು 20-25 ವರುಷದಿಂದ ಬೇರೆ ಬೇರೆ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮನೆಯಲ್ಲಿರುವ ಕಾರ್ಯಕ್ರಮ ಹಾಗೂ 2 ರಿಂದ 6 ನೇ ಪ್ರತಿವಾದಿಯವರ ಮನೆ ಕಾರ್ಯಕ್ರಮ ಬೇರೆ ಬೇರೆಯಾಗಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆ ಅದಾಗಿನಿಂದಲೂ ಪ್ರತಿವಾದಿಯರು ನನಗೆ ಯಾವುದಕ್ಕೂ ಕರೆದಿಲ್ಲ ಹಾಗೂ ನಾನು ಅಲ್ಲಿಗೆ ಹೋಗಿರುವುದಿಲ್ಲ. ನಮ್ಮ ತಂದೆ ತಾಯಿ ಜಿವಂತ ಇದ್ದ ಕಾಲಕ್ಕೆ ಅವರ ಅಂಗಡಿಗೆ ಮಾತ್ರ ಹೋಗಿ

ಬಂದು ಮಾಡುತ್ತಿದ್ದೆವು. ಸದರಿ ಅಂಗಡಿಯನ್ನು ನನ್ನ ಅಣ್ಣನ ಮಗ ನಡೆಸುತ್ತಿದ್ದಾನೆ. ಸದರಿ ಅಂಗಡಿ ಮನಗುಂಡಿ ಗ್ರಾಮ ಪಂಚಾಯಿತಿ ಹತ್ತಿರ ಇರುತ್ತದೆ.

2. ನಮ್ಮ ತಂದೆಗೆ ಜಮಿನಿನಿಂದ ಬಂದ ಅದಾಯವನ್ನು ಹೊರತುಪಡಿಸಿ ಬೇರೆ ಅದಾಯ ಇರಲಿಲ್ಲ ಎಂದರೆ ಸರಿ. ಸದರಿ ಅಂಗಡಿಯನ್ನು ನಮ್ಮ ತಂದೆಯವರೇ ಮಾಡಿದ್ದರು ಎಂದರೆ ಸಾಕ್ಷಿ ಅದನ್ನು ನನ್ನ ತಾಯಿ ನಡೆಸುತ್ತಿದ್ದರು ಸದರಿ ಅಂಗಡಿಯಿಂದ ಅವರು ಇಬ್ಬರು ಜಿವಂತ ಇದ್ದಾಗ ಮಾಡಿದ್ದರು ಎಂದರೆ ಸರಿ. ಸದರಿ ಅಂಗಡಿಯನ್ನು ಸಹ ಈ ದಾವೆಯಲ್ಲಿ ಸೇರಿಸಿರುತ್ತೇನೆ. ದಾವಾ ಜಮಿನುಗಳನ್ನು ನಾವು ಮದುವೆಗೆ ಮುಂಚೆ ನೊಡಿದ್ದೆವೆ ಮದುವೆ ನಂತರ ನೊಡಿರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ನನ್ನ ತಂದೆಗೆ ಅಂದರೇ ಆತ 2 ನೇ ಮದುವೆ ಅದ ಮೇಲೆ ಅವರಿಬ್ಬರ ಮಧ್ಯ ವೈಮನಸ್ಸು ಇತ್ತು ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಸ್ವತ್ತಿನ ಪೈಕಿ ಸರ್ವೇ ನಂ.329/1 5 ಎಕರೆ 26 ಗುಂಟೆ ಪೈಕಿ 4 ಎಕರೆ 1 ಗುಂಟೆ ಸ್ವತ್ತನ್ನು ಆತನೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

3. ಕರಿಯವ್ವನ ಮಕ್ಕಳು ಹಾಗೂ ಬಸವ್ವನ ಮಕ್ಕಳು ಮೊದಲಿನಿಂದಲೂ ಬೇರೆ ಬೇರೆ ಇದ್ದಾರೆ ಎಂದರೆ ಸರಿ. ಕಲ್ಲಪ್ಪನ ಮಕ್ಕಳು ಹೊಸ ಮನೆ ಕಟ್ಟಿದ್ದಾರಾ ಎಂದರೆ ಸಾಕ್ಷಿ ಹಳೇ ಮನೆ ಜಾಗದಲ್ಲಿ ಹೊಸ ಮನೆ ಕಟ್ಟಿದ್ದಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ಆತನ ಜಮಿನಿನಲ್ಲಿ ಬೊರವೆಲ್

ಹಾಕಿಸಿದ್ದಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಲ್ಲಪ್ಪ ಸಹ ಅತನ ಜಮಿನಿನಲ್ಲಿ ಬೊರವೆಲ್ ಹಾಕಿಸಿದ್ದಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ಆತನ ಜಮಿನಿನಲ್ಲಿ 2002 ನೇ ಇಸ್ವಿಯಲ್ಲಿ 100 ತೇಗದ ಗಿಡ 50 ಜಂಗ್ಲಿ ಗಿಡಗಳನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ಅದನ್ನು ನಮ್ಮ ತಂದೆ ಹಾಕಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಬೇರೆ ಬೇರೆ ಇದ್ದ ಕಾಲಕ್ಕೆ 1 ನೇ ಪ್ರತಿವಾದಿ ಹಾಗೂ ನನ್ನ ತಂದೆ ಕಲ್ಲಪ್ಪ ಕೂಡಿ ಇದ್ದರು ಎಂದರೆ ಸರಿ. ಬಸಪ್ಪ ಹಾಗೂ ಕಲ್ಲಪ್ಪನ ಹಿಸ್ಸೆಗೆ 10 ಎಕರೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

4. ದಾವೆ ಹಾಕುವ ಮೊದಲು 10-15 ವರುಷಗಳಿಂದ ನಮ್ಮ ತಂದೆ ಜಿಂವ ಇದ್ದ ಕಾಲದಲ್ಲಿ ಮೊದಲು ಆಸ್ತಿಯಲ್ಲಿ ನಾವು ಪಾಲು ಬಾಗ ಕೇಳುತ್ತಾರೆ ಬಂದಿರುತ್ತೇವೆ. ಸದರಿಯವರು ಆಸ್ತಿ ಯನ್ನು ಕೊಟ್ಟಿರುವುದಿಲ್ಲ ನಾವು ಹೆಣ್ಣು ಮಕ್ಕಳು ಆಗಿರುವ ಕಾರಣದಿಂದ ನಮ್ಮನ್ನು ವಾರಸಾದಿಂದ ಸಹ ತೆಗೆದು ಹಾಕಿರುತ್ತಾರೆ. 1 ನೇ ಪ್ರತಿವಾದಿಯ ಬಾಗಕ್ಕೆ ಬಂದ ಜಮಿನನನ್ನು ತೆಗೆದುಕೊಂಡು ಆತ ಬೇರೆ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹಾಕುವ ಮೊದಲು ದಾಖಲೆಗಳನ್ನು ನಾನು ನೊಡಿರುತ್ತೇನೆ. ದಾವೆ ಹಾಕುವ ಕಾಲಕ್ಕೆ ನನ್ನ ತಂದೆ 1 ನೇ ಪ್ರತಿವಾದಿ ಹಾಾಗೂ ಕಲ್ಲಪ್ಪ ರವರು ಬಾಗ ಮಾಡಿಕೊಂಡಿರುವ ವಿಚಾರ ಗೊತ್ತಾಗಿರುತ್ತದೆ. ನಾನು 1 ರಿಂದ 6 ನೇ ಪ್ರತಿವಾದಿಯರನ್ನು ದಾವಾ ಆಸ್ತಿ ಪಾಲು ಬಗ್ಗೆ ಕೇಳಿರುತ್ತೇನೆ.

ಅಸಲು ದಾವಾ ನಂಃ 444/2022

ಪಿ.ಡಬ್ಲೂ 1

5. ನಮ್ಮ ತಂದೆಗೆ ಯಾವುದು ದುಶ್ಚಟ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯವರು ಕುಟುಂಬದ ಏಳಿಗೆಗಾಗಿ ಕೆಲಸ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ಜಿವಂತ ಇದ್ದ ಕಾಲಕ್ಕೆ 2 ಎಕರೆ 28 ಗುಂಟೆ ಜಮಿನನ್ನು ಪ್ರತಿವಾದಿ ನಂ.7 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟ ಮಾಡಿದ ಹಣದಿಂದ ಆಸ್ತಿಗೆ ವಿನಿಯೊಗ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಗಳ ಪೈಕಿ ಕೆಲವು ಆಸ್ತಿ ಗಳನ್ನು ನನ್ನ ತಂದೆ ಜಿವಂತ ಇದ್ದ ಕಾಲಕ್ಕೆ ಮಾರಾಟ ಮಾಡಿದ್ದರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಜಿವಂತ ಇದ್ದಾಗ ಮಾರಾಟ ಮಾಡಿದ ಆಸ್ತಿಗಳಿಂದ ಬಂದ ಹಣವನ್ನು ನಮಗೂ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣ ಪಡೆದು ನಾವು ಇಲ್ಲಿಯವರಗೊ ಸಮ್ಮನಿದ್ದೆವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬಾಗಕ್ಕೆ ಬಂದ ಸ್ವತ್ತಿನಲ್ಲಿ ನನಗೆ ಯಾವದೇ ಹಕ್ಕು ಇಲ್ಲ ಕಲ್ಲಪ್ಪನ ಬಾಗಕ್ಕೆ ಬಂದ ಆಸ್ತಿ ಯಲ್ಲಿ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.